ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಬೇಡ ಸರ್. ಅದರ ಬಗ್ಗೆ ಸ್ಪಷ್ಟೀಕರಣ ಕೇಳಬೇಕಾಗುತ್ತದೆ. ಅದು ಉತ್ತರ ಗೊಂದಲಮಯವಾಗಿದೆ. ನಾಳೆ ಹಾಕಿಕೊಳ್ಳಿ ಸರ್. ನಾಳೆ ತೆಗೆದುಕೊಂಡು ಬಿಡಿ ಸರ್.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಆಮೇಲೆ ಒಂದು ಗೆಜೆಟ್ ಬೇರೆ ಮಾಡಿದ್ದೀರಿ.

ಉಪಾಧ್ಯಕ್ಷರು:– ನಾಳೆ ಅವಕಾಶ ಮಾಡಿಕೊಡೋಣ ಬಿಡಿ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– Notification english ನಲ್ಲಿದೆ, ಅದನ್ನು ಕನ್ನಡದಲ್ಲಿ ಮಾಡಿಸಿ ಕಳುಹಿಸಬೇಕು.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಮುಖ್ಯಮಂತ್ರಿಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದವರು.

(ಗೊಂದಲ)

ಉಪಾಧ್ಯಕ್ಷರು:– ನಾಳೆ ಅವಕಾಶ ಕೊಡೋಣ. Ok. ಬೋಪಯ್ಯನವರು ಹೇಳಿ. ಆರೋಗ್ಯ ಸಚಿವರು ಇಲ್ಲ. ಈಗ ಇದ್ದರಲ್ಲಾ?

2. ವಿಷಯ: ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ ಬಿಪಿಎಲ್ ಕಾರ್ಡ್‌ದಾರರಿಗೆ ಚಿಕಿತ್ಸೆ ನೀಡಲು ಗುರುತಿಸಿರುವ ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ನಿರಾಕರಿಸುತ್ತಿರುವುದರ ಬಗ್ಗೆ ಸಾಕಷ್ಟು ದೂರುಗಳಿರುವುದರಿಂದ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಉಪಾಧ್ಯಕ್ಷರೆ, ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ ಬಿಪಿಎಲ್ ಕಾರ್ಡುದಾರರಿಗೆ ಚಿಕಿತ್ಸೆ ನೀಡಲು ಗುರುತಿಸಿರುವ ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ನಿರಾಕರಿಸುತ್ತಿರುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ,

ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು ರಾಜ್ಯ ಸರ್ಕಾರವು 2009–2010ರಿಂದ ಜಾರಿಗೊಳಿಸಿದ್ದು, ಇದರಿಂದ ದಿನಾಂಕ:28/2/2015ಕ್ಕೆ ಇರುವಂತೆ ಈವರೆಗೆ 91728 ಆದ್ಯತಾ ಕುಟುಂಬಕ್ಕೆ ಸೇರಿದ ಸದಸ್ಯರಿಗೆ ಒಟ್ಟು 175 ನೊಂದಾಯಿಸಿದ ಆಸ್ಪತ್ರೆಗಳ ಮುಖಾಂತರ ಚಿಕಿತ್ಸೆ ನೀಡಲಾಗಿರುತ್ತದೆ. ಯೋಜನೆಯ ಫಲಾನುಭವಿಗಳ ಅನುಕೂಲಕ್ಕಾಗಿ ರಾಜ್ಯದ ಗಡಿ ಭಾಗದಲ್ಲಿರುವ ನೆರೆ ರಾಜ್ಯಗಳಲ್ಲಿ 37 ಆಸ್ಪತ್ರೆಗಳನ್ನು ಕೂಡಾ ನೊಂದಾಯಿಸಲಾಗಿದೆ. ನೊಂದಾಯಿಸಿದ ಒಟ್ಟು 175 ಆಸ್ಪತ್ರೆಗಳಲ್ಲಿ 155 ಖಾಸಗಿ ಆಸ್ಪತ್ರೆಗಳಾಗಿರುತ್ತವೆ.

ಫಲಾನುಭವಿಗಳಿಗೆ ಯೋಜನೆಯಡಿ ಚಿಕಿತ್ಸೆ ನೀಡಿದ ವರ್ಷವಾರು ವಿವರ ಈ ಕೆಳಗೆ ನಮೂದಿಸಿದಂತೆ ಇರುತ್ತದೆ.

ಕ್ರ.ಸಂ.	ವರ್ಷ	ಫಲಾನುಭವಿಗಳ ಸಂಖ್ಯೆ
1	2010–11	4095
2	2011–12	7565
3	2012–13	12842
4	2013–14	32212
5	2014–15	35014
	ಒಟ್ಟು	91728

ನೊಂದಾಯಿತ ಆಸ್ಪತ್ರೆಗಳು ಆದ್ಯತಾ ಕುಟುಂಬದ ಸದಸ್ಯರಿಗೆ ಚಿಕಿತ್ಸೆ ನೀಡುವುದನ್ನು ಖಾತ್ರಿಪಡಿಸಲು ಆಸ್ಪತ್ರೆಯ ಪ್ರವೇಶ ದ್ವಾರದಲ್ಲಿ ಕಿಯೋಸ್ಕ್ ಅಳವಡಿಸಿದ್ದು, ಅಲ್ಲಿ ಆರೋಗ್ಯ ಮಿತ್ರರನ್ನು ನೇಮಿಸಲಾಗಿದೆ. ಅವರು ವಾಜಪೇಯಿ ಆರೋಗ್ಯಶ್ರೀ ಯೋಜನೆಯ ಫಲಾನುಭವಿಗಳಿಗೆ ಮಾರ್ಗದರ್ಶನ ನೀಡಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುತ್ತಾರೆ ಮತ್ತು ಫಲಾನುಭವಿಗಳ ಕುಂದುಕೊರತೆಗಳನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು ಕುಂದು ಕೊರತೆಗಳನ್ನು ನಿವಾರಿಸುವಂತೆ ನೋಡಿಕೊಳ್ಳುತ್ತಾರೆ.

ಫಲಾನುಭವಿಗಳ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಕಾಲ್ ಸೆಂಟರ್‌ನ್ನು ಸ್ಥಾಪಿಸಿದ್ದು. ಅವರು ಫಲಾನುಭವಿಗಳ ಸಂಪರ್ಕದಲ್ಲಿದ್ದು ಕುಮದು ಕೊರತೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಮೇಲಾಧಿಕಾರಿಗಳ ಗಮನಕ್ಕೆ ತರುತ್ತಾರೆ. ಮೇಲಾಧಿಕಾರಿಗಳು ಕುಂದು ಕೊರತೆಯ ನಿವಾರಣೆಯ ಬಗ್ಗೆ ಕ್ರಮಕೈಗೊಳ್ಳುತ್ತಾರೆ.

ಕೆಲವು ಆಸ್ಪತ್ರೆಗಳು ಯೋಜನೆಯ ಫಲಾನುಭವಿಗಳ ತಕ್ಷಣ ಚಿಕಿತ್ಸೆ ನೀಡದೆ ಚಿಕಿತ್ಸೆಯನ್ನು ಮುಂದೂಡಿ ದಿನಾಂಕವನ್ನು ನಿಗದಿಗೊಳಿಸಿದ ವಿಷಯ ಸರ್ಕಾರದ ಗಮನಕ್ಕೆ ಬಂದಾಗ ಅಂತಹ ಆಸ್ಪತ್ರೆಗಳು ತಕ್ಷಣ ಚಿಕಿತ್ಸೆ ಕೊಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಇವುಗಳ ಹೊರತಾಗಿ ಯಾವುದೇ ದೂರು ಬಂದಲ್ಲಿ, ಅವುಗಳ ನಿವಾರಣೆಗಾಗಿ ಶೀಘ್ರ ಸೂಕ್ತ ಕ್ರಮಕೈಗೊಳ್ಳಲಾಗುವುದು. ಅದನ್ನು ಪಾಲಿಸದ ಆಸ್ಪತ್ರೆಯ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಉಪಾಧ್ಯಕ್ಷರೆ, ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ ಹೇಗೆ ತೆಗೆದುಕೊಳ್ಳಬಹುದು ಎಂದು ಎಲ್ಲವನ್ನು ಉತ್ತರದಲ್ಲಿ ಹೇಳಿದ್ದಾರೆ. ಆದರೆ, ವಾಸ್ತವಾಂಶ ಏನಿದೆ ಎಂದರೆ, ಆಸ್ಪತ್ರೆಗಳ ಹತ್ತಿರ ಜನರು ಬಿಪಿಎಲ್ ಕಾರ್ಡ್ ಹಿಡಿದುಕೊಂಡು ಹೋದರೆ, ಇಲ್ಲಿ ಇತ್ತೀಚೆಗೆ ಸೌಲಭ್ಯವಿಲ್ಲವೆಂದು ಹೇಳಿ ಕಳುಹಿಸುವುದೇ ಜಾಸ್ತಿಯಾಗಿದೆ. ಅವರು

ಮತ್ತೆ ವಾಪಸ್ಸು ಬಂದು ನಮ್ಮನ್ನೆಲ್ಲಾ ಕೇಳುವಂತಹದ್ದಾಗಿದೆ. ಇದು ಸಾಕಷ್ಟು ಇದೆ. ಆರೋಗ್ಯ ಸಚಿವರ ಗಮನಕ್ಕೆ ಕೆಲವರು ಪತ್ರದ ಮುಖಾಂತರ ಹಾಗೂ ಕೆಲವರು ನೇರವಾಗಿ ಅರ್ಜಿ ಬರೆದಿದ್ದಾರೆ. ನಿಮ್ಮ ಪತ್ರ ಸ್ವೀಕರಿಸಲಾಗಿದೆ, ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುತ್ತಾರೆ. ಎಷ್ಟು ಆಸ್ಪತ್ರೆಗಳ ಮೇಲೆ ಕ್ರಮ ಕೈಗೊಂಡಿದ್ದಾರೆ? ಎಂಬ ಬಗ್ಗೆ ಮಾಹಿತಿ ಕೊಟ್ಟರೆ ಒಳ್ಳೆಯದು. ಇದು ಸುಮ್ಮನೆ ಹೇಳುವುದು. ಕಾರ್ಯಕ್ರಮ ಚೆನ್ನಾಗಿದೆ. ಆದರೆ, implementation ಆಗುತ್ತಿಲ್ಲ. ಯಾರಿಗೆ ಸಿಗಬೇಕೋ ಅವರಿಗೆ ಸಿಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಯಾವ ಆಸ್ಪತ್ರೆಯವರು ಆ ಸೌಲಭ್ಯವನ್ನು ಕೊಡುವುದಿಲ್ಲವೋ, ಅವರ ಮೇಲೆ ಕ್ರಮ ಜರುಗಿಸುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:– ಖಂಡಿತವಾಗಿ ಹೇಳುತ್ತೇನೆ. ಮೈಸೂರಿನ ವಿಕ್ರಂ ಆಸ್ಪತ್ರೆಯ ಬಗ್ಗೆ ಹೇಳುತ್ತೇನೆ. ಇನ್ನೊಂದು ಆಸ್ಪತ್ರೆ ಕೂಡ ಇದೆ.

ಉಪಾಧ್ಯಕ್ಷರು:– ಅದನ್ನು ಸ್ವಲ್ಪ ನೋಡಿ.

ಶ್ರೀ ಕೆ.ಜಿ. ಬೋಪಯ್ಯ:– ಈ ರೀತಿಯಿದ್ದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ:– ತಾವು ಹೇಳುತ್ತಿರುವಂತಹ ಆಸ್ಪತ್ರೆಯ ಬಗ್ಗೆ ಇದೇ complaint ಅನ್ನುವುದಾದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು:– OK. ವಿಜಯ್‌ಕುಮಾರ್‌ರವರು ಹೇಳಿ. ಅವರು ಇಲ್ಲ. ಬಣಕಾರ್‌ರವರು ಹೇಳಿ.